Regd No BG 155

Sri "SATYAVADI"
— DAILY —
MYSORE 4
46 th Year

Protect the cow

— ಶ್ರೀ —

ಸತ್ಯವಾದಿ
SATYAVADI

ಸ್ಥಾಪಕರು— ಅಂಬನೆ ಸಿಂಸ್ಕೇದಾರ್ ಎಂ. ವಿ. ಸುಬ್ಬರಾಯುರು [ಬಿಡಿ ಪ್ರತಿ 3 ಪೆ

1—2—1962

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ.

ಗೋಸಂರಕ್ಷಣೆ ಮಾಡಿ

ಮೆರವಣಿಗೆ ಕಮ್ಯೂನಿಸ್ಟರ ಬೆಂಬಲ

ಕಮ್ಯೂನಿಸ್ಟ್ ಪಕ್ಷದ ನಾಯಕರಾದ ಶ್ರೀ ಬಿ ಟಿ ರಣದಿವೆ ಮೊನ್ನೆ ಬಳ್ಳಾರಿಯಲ್ಲಿ ಪತ್ರಿಕಾ ಸಮ್ಮೇಳನದಲ್ಲಿ ಮಾತನಾಡುತ್ತಾ, ಚೀನಾದೊಡನೆ ಸಂಧಾನದ ಮೂಲಕ ಸಮಸ್ಯೆಯನ್ನು ಪರಿಹರಿಸಿಕೊಳ್ಳಬೇಕು, ಸಂಧಾನ ವಿಫಲವಾಗುವುದಿಲ್ಲ ಎಂದರು ಅವರು ಶಾಂತಿಯ ಮಾತು ಮುಂದುವರಿಸುತ್ತಾ, ನಮ್ಮ ವಿದೇಶ ನೀತಿಯನ್ನು ಶ್ರೀ ವಿ ಕೆ ಮೆನನರು ವ್ಯಕ್ತ ಮಾಡುವುದರಿಂದ ಅನರಿಗೆ ನಾವು ಬೆಂಬಲಕೊಡುತ್ತೇವೆ ಎಂದರು.

ಸಿಡುಬು ನಿರೋಧ

ರಾಷ್ಟ್ರೀಯ ಸಿಡುಬು ನಿರ್ಮೂಲನ ಯೋಜನೆಗೆ 3 ನೇ ಯೋಜನೆಯಲ್ಲಿ 7 ಕೋಟಿ ರೂ. ನಿಗದಿ ಮಾಡಲಾಗಿದೆ ಎಂದು ಬುಧವಾರ ನವದೆಹಲಿ ವಾರ್ತೆ.

ಆ ಮನೆ

ಬರ್ಮಾದ ಸೇನಾ ಸೌಹಾರ್ದ ನಿಯೋಗ ಎಂಡು ದಿನಗಳ ಭೇಟಿಗಾಗಿ ಬೆಂಗಳೂರಿಗೆ ನಿನ್ನೆ ಆಗಮಿಸಿತು ತಂಬೇತಿ ಕಮಾಂಡಂಟ್ ಲೆಫ್ಟಿನೆಂಟ್ ಕರ್ನಲ್ ಥೂನ್ ಔಂಗ್ ಡಾರ್ ಅದರ ನಾಯಕರು.

ಮೆರಿನ್ ಇಂಜಿನ್ ಸಂಸ್ಥೆ

ಭಾರತದಲ್ಲಿ ಹಡಗುಗಳಿಗೋಸ್ಕರ ಮೆರಿನ್ ಡೀಸೆಲ್ ಇಂಜಿನ್ ನಿರ್ಮಿಸುವ ಕಾರ್ಖಾನೆ ಸ್ಥಾಪಿಸಲು ಭಾರತ ಸರ್ಕಾರ ಪರಿಶೀಲಿಸುತ್ತಿದೆ. ಪಶ್ಚಿಮ ಜರ್ಮನಿ ಮತ್ತು ಡೆನ್ಮಾರ್ಕ್ ಸರ್ಕಾರಗಳು ಭಾರತದೊಡನೆ ಸಹಕರಿಸಲು ಮುಂದೆಬಂದಿವೆ

ಸಚಿವರ ಹಿತನುಡಿ

ಓಟಿಗೋಸ್ಕರ ವಶದಾರರು ಮತ ಹಾಗೂ ಭಾವನೆಯ ಮೇಲೆ ಕಾಂಗ್ರೆಸು ಹೊರ ರಾಜಕೀಯ ಪಕ್ಷಗಳು ಆಟವಾಡುತ್ತಿರುವದು ಸರಿಯಲ್ಲ ಎಂದು ಭಾರತ ಆಹಾರ ಮಂತ್ರಿ ಶ್ರೀ ಎಸ್ ಕೆ ಪಾಟೀಲರು ಬೊಂಬಾಯಿನಲ್ಲಿ ತಿಳಿಸಿದ್ದಾರೆ

ವ್ಯಾಪಾರ ಸಂಸ್ಥೆಗಳು ಬಂದಾಗುವುವು

ಮಾರ್ಚ್ 1 ನೆಯ ತಾ|| ನಿಂದ ಸರ್ವ ಖಾಸಗಿ ಅಮದು ವ್ಯಾಪಾರವನ್ನು ಬರ್ಮ ಸರ್ಕಾರ ವಶಕ್ಕೆ ತೆಗೆದುಕೊಳ್ಳುವ ನಿರ್ಧಾರ ಮಾಡಿದೆ ಎಂದ ರಂಗೂನಿಂದ ವಾರ್ತೆ ಬಂದಿದೆ. ಅವರ ವ್ಯವಸ್ಥೆಗಳಿಗಾಗಿ 5 ಕಾರ್ಪೊರೇಷನ್‌ಗಳು ರಚಿಸಲಾಗವು 281 ಭಾರತೀಯ ಅಮದು ಸಂಸ್ಥೆಗಳು ಬಂದಾಗುವುವು

ಸ್ವಯಂಸೇವಕರ ರವಾನೆ

ಡಚ್ ವಶದಲ್ಲಿರುವ ಪಶ್ಚಿಮ ಇರಿಯಾಕ್ಕೆ ಇಂಡೋನೇಷಿಯಾ ಸಧ್ಯದಲ್ಲೆ 10 ಸಾವಿರ ಸ್ವಯಂಸೇವಕರನ್ನು ಕಳಿಸುವದೆಂದು ಜಕಾರ್ತಾದಿಂದ ವಾರ್ತೆ ಬಂದಿದೆ

ಪ್ರತಿಭಟನೆ

ನೇಪಾಳ ವಿದೇಶ ಮಂತ್ರಿ ಡಾ|| ತುಳಸಿ ಗಿರಿಯವರು ನೇಪಾಳ-ಭಾರತ ಗಡಿತನದ ಬಗ್ಗೆ ವಿರೋಧ ಹೇಳಿಕೆಯನ್ನಿತ್ತ್ರರಿಂದ, ನೇಪಾಳ ಸರ್ಕಾರಕ್ಕೆ ಭಾರತ ಸರ್ಕಾರ ಬಲವಾದ ಪ್ರತಿಭಟನೆ ಸಲ್ಲಿಸಿದೆ ಎಂದು ನವದೆಹಲಿ ವಾರ್ತೆ.

ಂಂ

ಅಖಿಲ ಭಾರತ ಹಿಂದೂ ಧಾರ್ಮಿಕ ಉಂಬಳಿ ಸಮಿತಿ ಅಧ್ಯಕ್ಷ ಡಾ|| ಸಿ. ಪಿ. ರಾಮಸ್ವಾಮಿ ಅಯ್ಯರರು ತಿರುನೆಲ್ವೇಲಿಯಲ್ಲಿ ಹೇಳಿಕೆಯಿತ್ತ್ರ, ದೇವಾಲಯದ ನಿಧಿಯನ್ನು ಶಿಕ್ಷಣಕಾರ್ಯಕ್ಕಾಗಿ ಉಪಯೋಗಿಸಬೇಕೆಂದು ನುಡಿದರು.

ದೇಶದಾದ್ಯಂತ ಇರುವ ಸುಮಾರು 3 ಸಾವಿರ ಪ್ರಾಥಮಿಕ ಆರೋಗ್ಯಕೇಂದ್ರಗಳ ಪರಿಶೀಲನೆ ಮಾಡುವ ನಿರ್ಧಾರನನ್ನು ಮೂವರ ಮಂತ್ರಿ ಮಟ್ಟದ ಸಮಿತಿ ನಿರ್ಧರಿಸಿದೆ ಎಂದು ಬೊಂಬಾಯಿ ವಾರ್ತೆ ತಿಳಿಸುತ್ತದೆ.

ಭದ್ರಾವತಿಯಲ್ಲಿ ಮೊನ್ನೆ ನಡೆದ ಪೌರಸಭೆಯ ಅಧಿವೇಶನದಲ್ಲಿ ವಿರೋಧ ಪಕ್ಷದವರು ಒಟ್ಟಾಗಿ ಭಾಗವಹಿಸಿಲ್ಲ.

ಯೋಗ್ಯರಿಗೆ ಓಟು ಕೊಡಿ

ಕಾಂಗ್ರೆಸಿನ ವಿನಾಶಕ್ಕೆ ದಾರಿಯಾಗಿರುವ ಕಾಂಗ್ರೆಸಿಗೇತರಿಗಿರುವ ಮೂರು ಆಶೆಗಳೆಂದರೆ, ನಾನು ಎಂ ಎಲ್ ಎ ಆಗಬೇಕು, ನನ್ನ ಸಂಗಡ ಅಥವಾ ಜಾತಿಜನರು ಆಯ್ಕೆ ಆಗಬೇಕು ಮತ್ತು ಏನೇ ಆಗಲಿ ನಾನು ಮಂತ್ರಿ ಆಗಬೇಕು — ಎಂದು ಮಾಜಿ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಮೊನ್ನೆ ಹಾಸನದಲ್ಲಿ ಬಹಿರಂಗ ಸಭೆಯಲ್ಲಿ ಭಾಷಣ ಮಾಡುತ್ತಾ ತಿಳಿಸಿದರು ಇವೆಲ್ಲವನ್ನು ತ್ಯಜಿಸಿರುವ ಕಾಂಗ್ರೆಸಿಗರಿಗೆ ಓಟುಮಾಡುವಂತೆ ಅವರು ತಿಳಿಸಿದರು

ಂಂ

ಕನ್ನಡ ರಾಜ್ಯವನ್ನು, ನಿರ್ದಿಷ್ಟವಾಗಿ ರಾಜ್ಯದ ರಾಜಧಾನಿಯನ್ನು ಪರಂ ಆಕ್ರಮಣದಿಂದ ರಕ್ಷಿಸಲು ತೀವ್ರ ಚಳುವಳಿ ನಡೆಸಲು ಕನ್ನಡ ಯುವಜನ ಸಭೆ ನಿರ್ಧರಿಸಿದೆ ಎಂದು ಬೆಂಗಳೂರು ವಾರ್ತೆ. 4 ನೆಯ ತಾ|| ಬೆಂಗಳೂರಿನಲ್ಲಿ ಒಂದು ದಿನ ನಡೆಯುವ ಸಮ್ಮೇಳನವನ್ನು ಮಾಜಿ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಉದ್ಘಾಟನೆ ಮಾಡುವರು

ಪ್ರಧಾನಿ ನೆಹರುರವರ ಕ್ಷೇತ್ರವಾದ ಅಹಮದಾಬಾದು ಜಿಲ್ಲೆಯಲ್ಲಿ 200 ಸಕ್ರಿಯ ಕಾಂಗ್ರೆಸ ಸದಸ್ಯರು ಕಾಂಗ್ರೆಸಿಗೆ ರಾಜೀನಾಮೆ ಕೊಡುವ ಬೆದರಿಕೆ ಹಾಕಿದ್ದಾರೆ.

ಜಿನೀವಾದಿಂದ ಬಂದಿರುವ ವಾರ್ತೆ ಪ್ರಕಾರ ಅಗಾಖಾರ ಮಗ ರಾಜಕುಮಾರ ಸದ್ದುದ್ದೀನ್ ಆಗಾಖಾರು ವಿಶ್ವ ಸಂಸ್ಥೆಯ ನಿರಾಶ್ರಿತರ ಪುನರ್ವಸತಿ ಹೈ ಕಮಿಷನರಂತಾಗಿ ನೇಮಿಸಲ್ಪಡಲಿದ್ದಾರೆ

ಈ ಮಾಹೆ 5 ಅಥವಾ 6 ರಂದು ಪಂ|| ನೆಹರು ಶಿವಮೊಗ್ಗಕ್ಕೆ ಬರುವ ನಿರೀಕ್ಷೆ ಇದೆ.

ಭಾರತದ ಅಧಿಕಾರಿಗಳು ಮತ್ತು ರಷ್ಯದ ನಿಯೋಗ ಇವರು ಕಲ್ಕತ್ತಾದಲ್ಲಿ ನಡೆಸಿದ್ದು ಸಾಂಸ್ಕೃತಿಕ ಒಪ್ಪಂದಕ್ಕೆ ಸಹಿಮಾಡುವರು.

ಈ ಮಾಹೆ 4-5 ರಲ್ಲಿ ಕಪ್ಪಾದ ಸೂರ್ಯನ ಹತ್ತಿರ 5 ಗ್ರಹಗಳು ಸೇರುವುದಾಗಿ ಪ್ರೆಸಿಡೆಂಟ್ ವೇಲೆ ಕಾಣುವದಾಗಿ ನ್ಯೂಯಾರ್ಕಿನ ವಾರ್ತೆ

ವಿವಿಧ ವಿಷಯಗಳು

ಮೈಸೂರು ಮೋಹಕದಾಸ್ ತುಳಸಿದಾಸ್ ಅಸ್ಪತ್ರೆಯ ಎದುರು ನಿವೇಶನದಲ್ಲಿ ಮೈಸೂರು ದಿವ್ಯ ಜೀವನ ಸಂಘದ ಮಹಿಳಾ ಶಾಖೆಯು ಮೊದಲನೆಯ ವಾರ್ಷಿಕೋತ್ಸವ ಮತ್ತು ಪ್ರಾರ್ಥನೋತ್ಸವವನ್ನು ಮತ್ತು ಮಹಿಳಾ ಶಾಖೆಯು ಕಟ್ಟಡದ ಶಂಕುಸ್ಥಾಪನೆಯನ್ನು ಶ್ರೀ ಶೃಂಗೇರಿ ಜಗದ್ಗುರುಗಳಾದ ಶ್ರೀಮದಭಿನವ ವಿದ್ಯಾತೀರ್ಥ ಮಹಾಸ್ವಾಮಿಯವರು ನಿನ್ನೆ ಸಂಜೆ ನೆರವೇರಿಸಿ ಪ್ರತಿಯೋರ್ವರೂ ಧರ್ಮಾಚರಣೆ ಮಾಡಬೇಕೆಂದು ತಿಳಿಸಿದರು.

ಮೈಸೂರು ಡಿ 'ಸುಬ್ಬಯ್ಯಾ ಅಸ್ಪತ್ರೆಯಲ್ಲಿರುವ ಮಹಾತ್ಮಾ ಗಾಂಧಿ ಸೇವಾ ಸಂಘದಲ್ಲಿ ಗಾಂಧಿ ಸಪ್ತಾಹದ ಅಂಗವಾಗಿ ನಾಳೆ ಸಂಜೆ 6-30 ಗಂಟೆಗೆ ಡಾ|| ಹೆಚ್ ತಿಪ್ಪೇರುದ್ರಸ್ವಾಮಿಯವರ ಭಾಷಣ ಸಭೆಯು ವುದು ಶ್ರೀ ಮತಿ ಚೆಲ್ಲಾಕ್ಕಮ್ಮ ಮತ್ತು ಪಾರ್ಟಿಯವರಿಂದ ಸಂಗೀತ.

ಕಾಶ್ಮೀರದ ಬಗ್ಗೆ ಅಧ್ಯಕ್ಷ ಕೆನೆಡಿಯವರ ನಿಲುವೆಯನ್ನು ಪಂ|| ನೆಹರು ನಿರಾಕರಿಸಿದ್ದ ವಾಷಿಂಗ್ಟನ್ ಅಧಿಕಾರಿವೃತ್ತಗಳಲ್ಲಿ ನಿರಾಶೆ ಉಂಟುಮಾಡಿದೆ. ಭಾರತ-ಪಾಕಿಸ್ತಾನಕ್ಕೆ ಯುದ್ಧವಾಗಲೂ ಭಾರಿ ನೆರವು ನೀಡುವ ಅಮೆರಿಕ ಭದ್ರತಾ ಸಮಿತಿಯಲ್ಲಿ ಕಾಶ್ಮೀರ ಪ್ರಶ್ನೆ ಬಂದಾಗ ಅಮೆರಿಕ ಬಹಿರಂಗವಾಗಿ ಪಕ್ಷ ವಹಿಸಬೇಕಾದೀತೆಂಬ ಚಿಂತೆ ಕೆನೆಡಿಯವರಿಗೆ ಇದೆ

ಕಾಶ್ಮೀರದ ಬಗ್ಗೆ ಭದ್ರತಾ ಮಂಡಲಿ 11 ಸದಸ್ಯರ ಸಭೆಯನ್ನು ಬುಧುವಾರ ಕರೆಯುವ ನಿರೀಕ್ಷೆ ಇದೆ ಎಂದು ನ್ಯೂಯಾರ್ಕಿನ ವಾರ್ತೆ.

25 ಸೆಂಟ್ ನಾಣ್ಯವನ್ನು ಹಾಕಿ 25 ಸೆಕೆಂಡುಗಳು ಕಾದಿದ್ದರೆ ಡಾಕ್ಯುಮೆಂಟಿನ ಪ್ರತಿ ಬರುವ ಯಂತ್ರವನ್ನು ನ್ಯೂಯಾರ್ಕಿನ ಕಚೇರಿ ಮುಂಭಾಗದಲ್ಲಿಟ್ಟಿದೆ

ನಾಳೆಯ ಪಂಚಾಂಗ

ಅಸ್ಮಾನ ವಾಹಾನಿದರ್ಶಕ ದರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಸಂಪತ್ಕೃಷ್ಣ ಜೋಯಿಸರಿಂದ

2 ದ್ವಾದಶಿ ಮೂಲ

ಪ್ರೈಜ್ ಬಾಂಡ್ ಡ್ರಾ —

ನವದೆಹಲಿ— ಭಾರತ ಸಂಕಾಂದಪರು 7 ನೆಯ ತ್ರೈಮಾಸಿಕ ಬಹುಮಾನ ಪತ್ರಗಳ ಡ್ರಾವನ್ನು 1962 ಮಾರ್ಚಿ 1 ರಂದು 14 ಕೇಂದ್ರಗಳಲ್ಲಿ ಏರ್ಪಡಿಸಿರುವರು ; ಆ ಕೇಂದ್ರಗಳು ಚಂಡೀಘಡ, ಮುಂಬೈ, ಕಲ್ಕತ್ತಾ, ನವದೆಹಲಿ, ಮದರಾಸು, ಕೊಯಮತ್ತೂರು, ಬೆಂಗಳೂರು, ನಾಗಪುರ, ಲಕ್ನೊ, ಪಾಟ್ನ, ಹೈದರಾಬಾದು, ಅಹಮದಾಬಾದು, ಜಯಪುರ ಮತ್ತು ತಿರುವನಂತಪುರ.

ಮಹಾಚುನಾವಣೆ ವಿಚಾರಗಳು

51-52 ರಲ್ಲಿ ನಡೆದ ಮೊದಲನೆ ಮಹಾಚುನಾವಣೆಯು 4 ತಿಂಗಳ ಕಾಲ ಹಿಡಿಯಿತು : 57 ರಲ್ಲಿ ನಡೆದ ಎರಡನೆಯದು 19 ದಿನಗಳು ಹಿಡಿಯಿತು : ತೃತೀಯ ಚ ನಾವಣೆಯು 62 ರ ಫೆಬ್ರವರಿ 16 ರಂದು ಪಶ್ಚಿಮ ಬಂಗಾಳಾದಿಂದ ಆರಂಭವಾಗಿ 62 ರ ಫೆಬ್ರವರಿ 25 ರ ವೇಳೆಗೆ ಮುಕ್ತಾಯಗೊಳ್ಳುವುದು. — 62 ರ ಚುನಾವಣೆಯಲ್ಲಿ ಪ್ರತಿದಾನ ಪತ್ರಗಳು 42 ಕೋಟಿ : ಬೇಕಾದ ಕಾಗದ 700 ಟನ್ನುಗಳು ; ವ ತದಾನ ಕೇಂದ್ರಗಳು 240000 ; ನೇಮಿಸಿಕೊಂಡ ಸಿ ಬ್ಬ ಂ ದಿ 1680000 — ಲೋಕಸಭೆಯಲ್ಲಿ 507 ಸ್ಥಾನಗಳಿವೆ , 7 ಮಂದಿಯನ್ನು ನಾಮ ಕರಣ ಮಾಡಲಾಗುವುದು — ಜಮ್ಮು ಮತ್ತು ಕಾಶ್ಮೀರವು ಸೇರಿಕೊಂಡು ವಿಧಾನ ಸಭೆಗಳಲ್ಲಿ ಒಟ್ಟು 3175 ಸ್ಥಾನಗಳಿರುವುವು — 62 ರಲ್ಲಿ ಮಹಿಳಾ ಮತದಾರರ ಸಂಖ್ಯೆ 10 ಕೋ ಟಿ ಇರಬಹುದೆ.

ಪುರಂದರದಾಸರು ಕಂಡ

ಲೋಕದ ರೀತಿನೀತಿಗಳು

.... ಪತಿಭಕ್ತಿ ಇಲ್ಲದವಳು ....

ಪತಿಭಕ್ತಿ ಇಲ್ಲದ ಹೆಂಡತಿಯು ಒಡೆನಾಟದಿಂದ ಅಭಿಮಾನ ಭಂಗವಾಗುತ್ತದೆ ; ಅಂಥವಳು ಗಂಡನ ಮನೆಗೆ ಬಂದರೆ ಎದ್ದು ನಿಲ್ಲದೆ ಮಂಚದ ಮೇಲೆಯೇ ಚಂದದಿಂದ ಕುಳಿತು ಮಾತನಾಡುತ್ತಾಳೆ , ಗಂಡನು ಹೇಳಿದುದೆಲ್ಲವನ್ನೂ ವಿಮರ್ಶಿಸಾಡಿ ಬೇಡ ವ್ಯರ್ಥ ಗಂಡುತೊತ್ತಿನ ಸಂಗದಿಂದಲೂ ಸಹ ಅಭಿಮಾನ ಭಂಗವಾಗುತ್ತದೆ ; ಗಂಡನು ಮನೆಗೆ ಒಂದನ್ನು ತಂದರೆ ಅದು ಹತ್ತೆಂದು ಭಾವಿಸದೆ, ಹತ್ತು ವಸ್ತುಗಳನ್ನು ತಂದರೂ ಒಂದನ್ನೇ ತಂದಿರೆಂದು ಹೇಳಿ ' ಇಂದೇನೂ ಸಿಗಲಿಲ್ಲವೋ ? ಎಂದು ಮುಖವನ್ನು ಬೇರೆ ಕಡೆಗೆ ತಿರುಗಿಸಿ ಹೇಳುವ ಹೆಂಗಸು ದುಷ್ಟಳೆನಿಸುತ್ತಾಳೆ ; ' ಮಕ್ಕಳು ಮರಿಗಳಿಗೆ ಏನೂ ಕೊಡಲಿಲ್ಲ, ಮನೆಯಲ್ಲೇನೂ ಚಿನ್ನದ ಒಡವೆಗಳಿಲ್ಲ ' ಎಂದು ಅಕ್ಕೇರಿಸಿ, ಚಿಕ್ಕವಳಾದ ತಾನು ಅತನ ಕೈಹಿಡಿದು ಕೆಟ್ಟೆನೆಂದ ಹೇಳುವ ಮೂರ್ಖ ಪತ್ನಿಯು ಸಂಗದಿಂದ ಅಭಿಮಾನ ಭಂಗವಾಗುತ್ತದೆ ; ತಾಯಿ ತಂದೆಯರನ್ನು ಮನೆಯಿಂದ ಹೊರಡಿಸು, ದಾಯಾದ್ಯಂ ಮಾಯೆಯನ್ನು ಬಿಡು, ಇಲ್ಲವಾದರೆ ಬೇರೆ ಮನೆಯನ್ನು ಕಟ್ಟು ಎಂದು ಹೇಳುವ ಮಾಟಗಾತಿಯು ಹಿಂದೆಲೆಯು ವೃತ್ಯುವಾಗಿದೆ : ಅವಳು, ಇನ್ನು ನಾನು ಬೇಕಾದರೆ ಅಣ್ಣ ತಮ್ಮಂದಿರನ್ನೂ ಅವರ ಹೆಂಡಂದಿಯರನ್ನೂ ಬಿಡಬೇಕೆಂದೂ ಚಪಲತ್ಯಾಂದ ಮಾತನಾಡುತ್ತಾಳೆ.

Help ' The Gorakshana '

Advertise in Goraksana and help the pious cause

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಜೆಚ್ಚೆಚ್ಚಾಗಿ ನಡೆಯಲಿ

" ಗೋರಕ್ಷಣ " ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ.

ಗೋರಕ್ಷಣ ಪತ್ರಿಕೆಗೆ ಸಹಾಯಧನ ವೈ ಮತ್ತು ಪ್ರಕಟಿಸಲು ಅನುಕೂಲವಾದ ಲೇಖನಗಳನ್ನೂ ವಾರ್ತೆಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ : ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು 4

ವುಡ್‌ಲ್ಯಾಂಡ್ಸ್ 26-1-62 ರಿಂದ

ಪ ಮಾ (ಹಿಂದಿ) SHAMA

ಪಾತ್ರ-ಸುರಯ್ಯ, ನಿಮ್ಮಿ, ವಿಜೆ ದತ್ ; ಸಂಗೀತ : ಗುಲಾಂ ಮಹಮದ್

ಅನೋಕ್ ಹಿಂದಿ ಕಲಾಕೃತಿ [ದಿನವಹಿ 3 ಪ್ರದರ್ಶನಗಳು]

ಆಪೆರಾ ಚಿತ್ರ ವೈಭವ 5 ನೇ ವಾರ

ನಾ ಗಾ ಜು ರ್ ನ (ಕನ್ನಡ)

ತಾರಾಗಣ— ರಾಜಕುಮಾರ್, ನಾಗಯ್ಯ, ವರಲಕ್ಷ್ಮಿ, ಹಂಣೆ, ನರಸಿಂಹರಾಜು ಕಾಂತಾ ರಾವ್, ರಾಜನಾಲ [ದಿನವಹಿ 3 ಆಟಗಳು]

SHAKTI SUDHA

A Superb Tonic

— — One-man Helicopter — —

Edited, Printed & Published by the Proprietor, Dharma Prrchara Nirata M. S. Krishna Rao, at the Satyavadi Press Chamarajapuram, Mysore 4.